ವನ್ಯಸಂಕುಲಗಳಿಗೆ ಅನುಕೂಲವಾಗಿದೆ. 'ಕೆರೆ ಹಾಳಾಗಿದ್ದನ್ನು ಊರು ಅಸಹಾಯಕನಂತೆ ನೋಡುತ್ತಾ ನಿಂತಿತ್ತು. ಜನರಿಂದಲೂ ಕೆಲಸ ಸಾಧ್ಯವೆಂದು ಸಂಸ್ಥೆ ತೋರಿಸಿತು. ಹೂಳು ತೆಗೆದ ಮೇಲೆ ನೀರು ನಿಂತಿದ್ದು ನೋಡುವಾಗ ಬಹಳ ಖುಷಿಯಾಗುತ್ತಿದೆ. ಕೆರೆಯ ಮಹತ್ವ ಮನದಟ್ಟಾಗಿದೆ. ಕೃಷಿ ಬದುಕಿನ ಮೂಲವಾದ ಕೆರೆಯನ್ನು ಇನ್ನು ಊರು ಯಾವತ್ತೂ ಮರೆಯುವುದಿಲ್ಲ' ಎಂದು ಕೆರೆ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಮಂಜುನಾಥ ನಂಜವಳ್ಳಿ ಖುಷಿ ಪಡುತ್ತಾರೆ.

### ಕೆರೆ ಹೂಳೆತ್ತಿದ್ದಾಗ ಎಷ್ಟು ಎಕರೆ ವಿಸ್ತೀರ್ಣ?

ಎಷ್ಟು ಆಳಕ್ಕೆ ಹೂಳು ತೆಗೆದರು? ಸೀಮಿತ ವಿವರ ಮಾತ್ರ ದೊರೆಯುತ್ತದೆ. ಕೆರೆ ಸಂರಕ್ಷಣೆಯ ಪ್ರಜ್ಞೆ ಮೂಡಲು ಇಷ್ಟು ಸಾಕಾಗುವುದಿಲ್ಲ. ಧರ್ಮಸ್ಥಳ ಸಂಸ್ಥೆಯ ಜಿಲ್ಲಾ ನಿರ್ದೇಶಕರು, ತಾಲ್ಲೂಕು ಯೋಜನಾಧಿಕಾರಿಗಳು, ಸಂಸ್ಥೆಯ ಅಭಿಯಂತರರು, ಕೃಷಿ ಮೇಲ್ವಿಚಾರಕರು, ವಲಯ ಮೇಲ್ವಿಚಾರಕರು, ಊರ ಹಿರಿಯರು, ಜನಪ್ರತಿನಿಧಿಗಳ ಜೊತೆಗಿನ ಕೆರೆ ಅಭಿವೃದ್ಧಿಯ ನಿರಂತರ ಮಾತುಕತೆ, ಸಭೆಗಳು ಜಲ ಕಾಯಕಕ್ಕೆ ಜನಸಂಘಟನೆಯ ಮಹತ್ವ ಹಾಗೂ ಶಿಸ್ತು ಕಲಿಸಿದವು. ಮಾಹಿತಿಯ ಕ್ರೋಡೀಕರಣವಾಯಿತು. ಕೆರೆ ಹೂಳೆತ್ತುವ ರೀತಿ, ಹಣ ಎಷ್ಟು ಖರ್ಚಾಗುತ್ತದೆಂಬ ಅನುಭವ ಹಳ್ಳಿಗರಿಗೂ ದೊರೆಯಿತು. ಕೆರೆ ಹೂಳೆತ್ತುವಂತೆ ಹಳ್ಳಿಗರಿಂದ ಅರ್ಜಿ ಬಂದು ಎರಡು ತಿಂಗಳಲ್ಲಿ ಶೀಘ್ರವಾಗಿ ಹಲವು ಸಭೆ ನಡೆದ ಬಳಿಕ ಅಂದಾಜು ಯೋಜನೆಯಾಯ್ತು. ಒಂದು ಎಕರೆ ಕ್ಷೇತ್ರದಲ್ಲಿ ಒಂದು ಮೀಟರ್ ಆಳಕ್ಕೆ ಹೂಳು ತೆಗೆದರೆ 4046 ಕ್ಯುಬಿಕ್ ಮೀಟರ್ ಮಣ್ಣು ದೊರೆಯುತ್ತದೆ. ಕೆರೆ ಸಂಪೂರ್ಣ ಒಣಗಿದ್ದಾಗ, ಮಣ್ಣು ಹಾಕುವ ಜಾಗ ಕೆರೆಯ ಸನಿಹದಲ್ಲಿದ್ದರೆ ಕೇವಲ 25 ರೂಪಾಯಿ ವೆಚ್ಚದಲ್ಲಿಯೂ ಒಂದು ಕ್ಯುಬಿಕ್ ಮೀಟರ್ ಹೂಳು ತೆಗೆಯಬಹುದು. ಒಂದು ಕ್ಯುಬಿಕ್ ಮೀಟರ್ ಜಾಗದಲ್ಲಿ ಒಂದು ಸಾವಿರ ಲೀಟರ್ ಸಂಗ್ರಹವಾಗುತ್ತದೆಂಬ ತಾಂತ್ರಿಕ ವಿವರಗಳು ಇವರಿಗೆಲ್ಲ ಅರ್ಥವಾಗಿದೆ. ಜನರನ್ನು ಜೊತೆಗೆ ಒಯ್ಯುವ ಕೆರೆ ಅಭ್ಯುದಯದ ಈ ಪಯಣ ಜಲಮೂಲ ಸಂರಕ್ಷಣೆಗೆ ತಲೆಹೂಳು ತೆಗೆಯುವ ಜಲಸಾಕ್ಷರತೆಯ ಕಾರ್ಯವೂ ಆಗಿದೆ.

### ಸಣ್ಣ ಕೆರೆಗಳ ದೊಡ್ಡ ಲಾಭ

ರಾಜ್ಯದಲ್ಲಿ 39,179 ಕೆರೆಗಳಿವೆ. ಇವುಗಳಲ್ಲಿ ಶೇಕಡಾ 90ರಷ್ಟು 100 ಎಕರೆಗಿಂತ ಕಡಿಮೆ ನೀರಾವರಿ ಸಾಮರ್ಥ್ಯದ ಸಣ್ಣ ಸಣ್ಣ ಕೆರೆಗಳಾಗಿವೆ. ದೊಡ್ಡ ಅಣೆಕಟ್ಟು, ಬೃಹತ್ ಕಾಲುವೆ ಯೋಜನೆಗಳು ಕಳೆದ 40–50 ವರ್ಷಗಳಲ್ಲಿ ಮಹತ್ವ ಪಡೆಯುತ್ತ ಸಾವಿರಾರು ಕೋಟಿ ಯೋಜನೆಗಳ ರಂಗಿನಾಟ ಮೆರೆದಿದೆ. ಇದರಿಂದ ಕಾಲುಬುಡದ ಕೆರೆ ಮರೆತೇಹೋಗಿದೆ. ಖಾಸಗಿ



ನಂಜವಳ್ಳಿಯ ತುಂಬಿದ ಕೆರೆಯ ಜಲವೈಭವ.

## ಧರ್ಮಸ್ಥಳ ಸಂಸ್ಥೆ ಕೆರೆ ಕಾಯಕ ಶುರು ಮಾಡಿದ್ದು ಹೇಗೆ?

ಕೆರೆಯ ಕುರಿತ ಜಾಗೃತಿಯೊಂದು ಸ್ವಾತಂತ್ರ್ಯಾನಂತರದಲ್ಲಿ ಇದೇ ಮೊದಲ ಬಾರಿಗೆ ಸಮುದಾಯದ ಬಹು ದೊಡ್ಡ ಕಾರ್ಯವಾಗಿ ಹಬ್ಬಿದೆ. ರಾಜ್ಯದಲ್ಲಿ 2016ರ ಬರಗಾಲವನ್ನು ನಾವು 'ಟ್ಯಾಂಕರ್ ಬರ' ಎಂದೇ ಕರೆಯಬಹುದು. ಎಲ್ಲಾ ರಸ್ತೆಗಳಲ್ಲಿ ನೀರು ಸಾಗಣೆಯ ಟ್ಯಾಂಕರ್‌ಗಳು ಓಡಾಡುತ್ತಿದ್ದ ನೋಟ ಸಾಮಾನ್ಯವಾಗಿತ್ತು. ಕರಾವಳಿ, ಮಲೆನಾಡು, ಬಯಲುಸೀಮೆಗಳ ವ್ಯತ್ಯಾಸವಿಲ್ಲದೆ ಜಲಕ್ಷಾಮ ಬಹುದೊಡ್ಡ ಹೊಡೆತ ನೀಡಿದ ವರ್ಷವದು. ಒಂದು ಬಿಂದಿಗೆ ನೀರಿಗೆ ಹತ್ತಾರು ಕಿಲೋ ಮೀಟರ್ ಅಲೆದಾಡಿದ ಊರುಗಳಿವೆ. 50 ಕಿ.ಮೀ. ದೂರದಿಂದ ಟ್ಯಾಂಕರ್ ನೀರು ಪಡೆದು ಬದುಕಿದ ಹಳ್ಳಿಗಳಿವೆ. ನೀರಿಲ್ಲದ ಕಾರಣಕ್ಕೆ ದನಕರುಗಳನ್ನು ಸಂಪೂರ್ಣ ಮಾರಾಟ ಮಾಡಿ ವಲಸೆ ಹೋದ ಕಲಬುರಗಿಯ ಆಳಂದದ ಗ್ರಾಮಗಳಿವೆ. ಆ ವರ್ಷ 110 ತಾಲೂಕುಗಳನ್ನು ಬರಪೀಡಿತವೆಂದು ಸರ್ಕಾರ ಘೋಷಿಸಿತ್ತು. ನೀರಿಲ್ಲದೇ ತತ್ತರಿಸಿದ ಅನುಭವಗಳಿಂದ ಅದೇ ವರ್ಷ ಸುರಿಯುವ ಮಳೆ ನೀರು ಹಿಡಿಯಲು ಗ್ರಾಮಾಭಿವೃದ್ಧಿ ಸಂಸ್ಥೆಯ ಕೆರೆ ಪುನಶ್ಚೇತನವೂ ಶುರುವಾಗಿದೆ.

**ವೀರೇಂದ್ರ ಹೆಗ್ಗಡೆಯವರ ಜೊತೆ ಕೆರೆ ಮಾತುಕತೆ**

ಧರ್ಮಸ್ಥಳ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ಪ್ರತಿ ವರ್ಷ ಸಾವಿರಾರು ಕಿ.ಮೀ. ಸುತ್ತಾಡಿ ರಾಜ್ಯದ ವಿವಿಧ ಪ್ರದೇಶಗಳ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಒಮ್ಮೆ ಶಿವಮೊಗ್ಗ ಜಿಲ್ಲೆಯ ಕಾರ್ಯಕ್ರಮಕ್ಕೆ ಪತ್ನಿ ಹೇಮಾವತಿ ಹೆಗ್ಗಡೆಯವರ ಜೊತೆಗೆ ಹೊರಟಿದ್ದರು. ರಸ್ತೆಯಲ್ಲಿ ಸಂಚರಿಸುವಾಗ ನೀರಿಗಾಗಿ ಜನರ ಓಡಾಟ ಸಂಕಟ ಗಮನಿಸಿದ್ದರು. ಶಿವಮೊಗ್ಗ ಸಾವಳಂಗದ ನೂರಾರು ಎಕರೆಯ ವಿಶಾಲ ಕೆರೆ ನೋಡುತ್ತ, 'ಇಷ್ಟೊಂದು ಕೆರೆ ಇರುವಾಗ ನೀರಿನ ಸಮಸ್ಯೆ ಏಕೆ ಬರುತ್ತಿದೆ? ಕೆರೆ ಪುನಶ್ಚೇತನ ಮಾಡಿದರೆ ನಮ್ಮ ಹೆಣ್ಣುಮಕ್ಕಳು ನೀರಿಗೆ ಅಲೆಯುವುದು ಕಡಿಮೆಯಾಗುತ್ತದಲ್ಲವೇ?' ಎಂದು ಹೇಮಾವತಿ ಹೆಗ್ಗಡೆ ಕೇಳಿದರು. 'ಸಮಸ್ಯೆಯನ್ನು ನಾವು ಸಮಸ್ಯೆಯಾಗಿ ಮಾತ್ರ ನೋಡುವುದಿಲ್ಲ. ಧರ್ಮಸ್ಥಳ ಪುಣ್ಯ ಕ್ಷೇತ್ರ, ಗ್ರಾಮಾಭಿವೃದ್ಧಿ ಸಂಸ್ಥೆ ಜೊತೆಗಿರುವುದರಿಂದ ಪರಿಹಾರದ ದೃಷ್ಟಿಯಲ್ಲಿ ಇದನ್ನು ನೋಡಿದೆವು. ಆಗ ನಮ್ಮೂರು ನಮ್ಮ ಕೆರೆ ಯೋಜನೆ ಪರಿಕಲ್ಪನೆ ರೂಪುಗೊಂಡಿತು' ಎಂದು ರಾಜ್ಯದ ಹಳೆಯ ಕೆರೆಗಳ ಹೂಳೆತ್ತುವ ವಿಸ್ತೃತ ಯೋಜನೆ ಹಿಂದಿನ ಕಾರಣಗಳನ್ನು